೧೦೦ ಕ್ಕೆ ೫ ರಷ್ಟು ಅಲ್ಲಿಂದ ಇಲ್ಲಿಗೆ ಟ್ರಾನ್ಸ್‌ಫರ್ ಕೊಡಬೇಕೆಂದರೆ ಕಾಲೇಜಿನ ಪ್ರಿನ್ಸಿಪಾಲ್‌ರವರು ಎನ್. ಓ. ಸಿ. ಕೊಡಬೇಕು. ಆದೆಲ್ಲಾ ಆದಮೇಲೆ ಟ್ರಾನ್ಸ್‌ಫರ್ ಕೊಡಬೇಕು. ಇದರಲ್ಲಿ ಯಾವ ಕಿಸ್ಕ್ರಿಮಿನೇಷನ್ ಮಾಡುವುದಕ್ಕೆ ಅವಕಾಶವಿಲ್ಲ. ೧೧-೨-೮೮ರಲ್ಲಿನ ರೆಸಲ್ಯೂಷನ್ ಇದೆ ದಯವಿಟ್ಟು ಇದನ್ನು ಅರ್ಧಗಂಟೆ ಚರ್ಚೆಗೆ ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಪೂರ್ತಿಯಾಗಿ ಸ್ಪಷ್ಟ ಮಾಡಿ ಉತ್ತರವನ್ನು ಕೊಡಲಿ.

೧೨-೦೦ ಮಧ್ಯಾಹ್ನ

ಶ್ರೀ ಬಿ. ರಾಚಯ್ಯ.—ಅಲ್ಲಿಂದ ಕಳಂಹಿಸತಕ್ಕ ಮ್ಯಾಂಡೇಟರಿ ಪ್ರಾವಿಜನ್ ಬಗ್ಗೆ ಹೇಳಿದ್ದಾರೆ. ಮತ್ತೆ ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಮೆರಿಟ್ ಸೀಟ್ ಮತ್ತು ಖಾಸಗೀ ಸೀಟ್ ಎರಡನ್ನೂ ಏಕ ರೀತಿಯಿಂದ ನೋಡುವುದಾದರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಬಕಳಷ್ಟು ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಬೇಸಿಸ್ ಮೇಲೆ ತೆಗೆದುಕೊಂಡಿರತಕ್ಕ ಸೀಟುಗಳಿಗೆ ಮೆರಿಟ್ ಇರುವುದಿಲ್ಲ. ಮೆರಿಟ್ ಇರತಕ್ಕ ವರಿಗೆ ಆದ್ಯತೆ ಮೇಲೆ ಸೀಟುಗಳನ್ನು ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಇದನ್ನು ಪುನಃ ಪರಿಶೀಲಿಸಬೇಕೆಂದು ಬರೆದಿದ್ದೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಕೇಂದ್ರ ಸರ್ಕಾರದವರು.....

ಶ್ರೀ ಬಿ. ರಾಚಯ್ಯ.—ಯಾರಿಗೋ ಒಬ್ಬರಿಗೆ ಖಾಸಗೀ ಕಾಲೇಜಿನಲ್ಲಿ ಕ್ಯಾಪಿಟೇಷನ್ ಫೀ ಇಲ್ಲದೆ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಆ ರೀತಿ ನಾವು ಸೀಟನ್ನು ಕೊಟ್ಟಿಲ್ಲ. ಹಿಂದೆ ಕೊಟ್ಟಿರ ಬಹುದು. ನಾನು ಬಂದ ಮೇಲಂತೂ ಕೊಟ್ಟಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಾನು ತೋರಿಸುತ್ತೇನೆ.

ಅಧ್ಯಕ್ಷರು.—ತೋರಿಸಿ. ನೋಡೋಣ.

ಶ್ರೀ ಎನ್. ಎಸ್. ಖೂಡ್ —ಮಾನ್ಯ ಮಂತ್ರಿಗಳು ಕೊಟ್ಟಿಲ್ಲವೆಂದು ಹೇಳುತ್ತಾರೆ. ಅವರು ಬಂದ ಮೇಲೆ ಕೊಟ್ಟಿದ್ದಾರೆಂದು ಅಲ್ಲ ಅಧಿಕಾರಿಗಳು ಮಾಡಿದ್ದನ್ನು ಹೇಳುತ್ತಿದ್ದೇವೆ. ಆ ರೀತಿ ಕೊಟ್ಟಿದ್ದಾರೆ, ಒಬ್ಬರಿಗೆ ಕೊಟ್ಟ ಮೇಲೆ ಬೇರೆಯವರಿಗೂ ಕೊಡಬೇಕು. ಅದಕ್ಕೂ ಇದಕ್ಕೂ ಏತಕ್ಕೆ.....

ಅಧ್ಯಕ್ಷರು.—ಆಯಿತು ನೋಡುತ್ತಾರೆ, ಕುಳಿತುಕೊಳ್ಳಿ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪ್ರತಿಭಾವಂತ ಅಭ್ಯರ್ಥಿಗಳನ್ನು ನೇರ ನೇಮಕ ಮಾಡಿಕೊಳ್ಳುವ ಬಗ್ಗೆ.

೧೨೭೬. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೩ ರಿಂದ ಸರ್ಕಾರದಿಂದ ನೇರವಾಗಿ ನೇಮಕಾತಿ ಹೊಂದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು.

(ಆ) ಈ ನೇಮಕಾತಿ ವಿರುದ್ಧ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ಇದುವರೆಗೆ ಯಾರನ್ನೂ ನೇಮಕಾತಿ ಮಾಡಿಲ್ಲ. ಆದರೆ ೧೯೮೨-೮೩ ಹಾಗೂ ೧೯೮೩-೮೪ನೇ ಸಾಲಿಗೆ ಸಂಬಂಧಿಸಿದಂತೆ ಮೌಖಿಕ ಪರೀಕ್ಷೆ ಇಲ್ಲದೆ ಹಾಗೆ ನೇರವಾಗಿ ನೇಮಕ ಮಾಡಿಕೊಳ್ಳಬಹುದಾದ ಹುದ್ದೆಗಳಿಗೆ ೩೫ ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

(ಅ) ತಡೆಯಾಜ್ಞೆ ತೆರವು ಮಾಡುವಂತೆ ಕೋರಿ ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಎರಡೂ ಕಡೆಯ ವಾದ ಕೇಳಿದ ವಿಭಾಗ ಪೀಠವು ತಡೆಯಾಜ್ಞೆಯನ್ನು ತೆರವು ಮಾಡಲು ನಿರಾಕರಿಸಿತು, ಈ ಪ್ರಕರಣವು ಈಗ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮುಂದೆ ಇದೆ. ಇದರ ಜೊತೆಗೆ ನಾನು ಒಂತ್ತೊಂದು ಮಾಹಿತಿಯನ್ನು ಇಲ್ಲಿ ಕೊಡುವುದು ಸೂಕ್ತವೆಂದಾದರೆ, ಈ ವಿಚಾರ ಇವತ್ತು ಆಡಳಿತ ಮಂಡಲಿಯ ಮುಂದೆ ಬಂದಿದೆ ಇವತ್ತು ವಿಚಾರಣೆ ಆಗುತ್ತದೆ. ತಡೆಯಾಜ್ಞೆಯನ್ನು ತೆರವು ಮಾಡಬೇಕೆಂಬ ಬೇಡಿಕೆ ಏನಿದೆ ಅದರ ಬಗ್ಗೆ ಇವತ್ತು ನಿರ್ಣಯ ಆಗಬಹುದೆಂದು ಕಾಣುತ್ತದೆ ಈ ವಿಚಾರ ನೆನೆಗುದಿಗೆ ಬಿದ್ದುದಕ್ಕೆ ವಿಷಾದಿಸುತ್ತೇನೆ. ಇಡೀ ದೇಶದಲ್ಲಿ ಇರದಂತಹ ಹೊಸ ಯೋಜನೆಯನ್ನು ತಂದು, ೧೯೮೩ರಲ್ಲಿ ಘೋಷಣೆಯನ್ನು ಮಾಡಿದೆ. ಆದರೆ ದುರ್ದೈವದಿಂದ ನಾವು ಇಚ್ಛಿಸಿದ್ದಂತೆ, ಒಂದಲ್ಲ ಒಂದು ಕಾರಣದಿಂದ ಈ ಯೋಜನೆಯನ್ನು ಜಾರಿಗೆ ತರುವುದು ಸಾಧ್ಯವಾಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಏನು ವಿವರಗಳನ್ನು ಕೊಟ್ಟಿದ್ದಾರೆ ಅದನ್ನು ಅನಿವಾರ್ಯವಾಗಿ ಹೇಳಿದ್ದಾರೆಂದು ಹೇಳುತ್ತೇನೆ. ೫ ವರ್ಷಗಳ ಹಿಂದೆ ಏನು ಮಾಡಿದ್ದಾನ ಮಾಡಿದ್ದರು ಅದನ್ನು ಜಾರಿಗೆ ತರುವುದಕ್ಕೆ ಆಗಿಲ್ಲವೆಂದು ಹೇಳಿದ್ದಾರೆ. ಹೈ ಕೋರ್ಟ್ ನ್ಯಾಯ ಮಾಡತಕ್ಕ ಸಂಸ್ಥೆ. ಇದು ಸಾಮಾಜಿಕ ನ್ಯಾಯ ಮಾಡಲಿಕ್ಕೆ ಹಿಂಜರಿದು ೫ ವರ್ಷ ಇಟ್ಟುಕೊಂಡಿದ್ದಕ್ಕೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ ಎಂಬ ಪ್ರಶ್ನೆ ಬರುತ್ತದೆ. ಕೋರ್ಟ್‌ಗಳು ಸಮಾಜಿಕ ನ್ಯಾಯ ಮಾಡುವುದಕ್ಕೆ ಇವೆಯೇ ಅಥವಾ ಅನ್ಯಾಯ ಮಾಡುವುದಕ್ಕೆ ಇವೆಯೇ ? ಹೈಕೋರ್ಟುಗಳಲ್ಲಿ ಬಡವರಿಗೆ ನ್ಯಾಯ ಸಿಗುವುದಿಲ್ಲ, ಬರೀ ಸಾಹುಕಾರರಿಗೆ ಸಿಗುತ್ತದೆಂದು ಹೇಳುತ್ತಿದ್ದೇವೆ. ಬಡವರ ಪರವಾಗಿ ನೀವು ಏನು ಮಾಡಿದಿರಿ ? ಏನು ಕಾರ್ಯಕ್ರಮ ತೆಗೆದುಕೊಂಡಿರಿ ? ಎಷ್ಟು ಸಾರಿ ಒತ್ತಾಯ ಮಾಡಿದಿರಿ ? ೫ ವರ್ಷಗಳಿಂದ ಸರ್ಕಾರೀ ವಕೀಲರಿಗೆ ಕೆಲಸ ಇಲ್ಲವೇ ? ಅಥವಾ ಅವರಿಗೆ ಬಹಳ ಕೆಲಸ ಇದೆಯೇ ? ಇದಕ್ಕಿಂತ ಸಾಮಾಜಿಕ ನ್ಯಾಯ ಮಾಡತಕ್ಕ ಕೆಲಸ ಬೇರೆ ಯಾವುದು ಇದೆ ? ಎರಡನೆಯದಾಗಿ, ಟ್ರಿಬ್ಯೂನಲ್ ಮುಂದಿದೆ, ವೆಕೇಟ್ ಮಾಡಿಸೋಣ ಎಂದು ಹೇಳಿದಿರಿ. ವೆಕೇಟ್ ಮಾಡಿದ್ದರೆ ಏನು ಎಂಬ ಪ್ರಶ್ನೆ ಬರುತ್ತದೆ. ಈ ಒಂದು ನ್ಯೂನತೆಯನ್ನು ಸರಿ ಮಾಡುವುದಕ್ಕೆ ೫ ವರ್ಷ ವಾದರೂ ಸಾಧ್ಯವಾಗಿಲ್ಲವೇ ? ಹೈಕೋರ್ಟಿನಲ್ಲಿ ೫ ವರ್ಷ ಇರಬೇಕಾಯಿತೇ ? ಯಾವ ಕಾರಣದಿಂದ ಅವರು ವೆಕೇಟ್ ಮಾಡುವುದಕ್ಕೆ ತಿರಸ್ಕಾರ ಮಾಡಿದರು ? ನೇರವಾಗಿ ನೇಮಕ ಮಾಡುವುದಕ್ಕೆ ರೂಲ್ಸ್‌ನಲ್ಲಿ ಏನು ನ್ಯೂನತೆ ಇತ್ತು ? ಅದನ್ನು ಸರಿ ಮಾಡುವುದಕ್ಕಾಗಲಿಲ್ಲವೇ ? ನೀವು ಮಾಡದೆ ಇರಬಹುದು, ಆದರೆ ನಿಮ್ಮ ಅಧಿಕಾರಿಗಳು ಬೇಕಾಗಿಯೇ ಮಾಡಿದ್ದಾರೆಂದು ಹೇಳುತ್ತೇನೆ. ಮಾನ್ಯಾನ ಮಾಡಿದವರಿಗೂ ಕೂಡ ಕ್ರಿಯಾಶೀಲತೆ ಇರಬೇಕು. ನಿಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಅಭಿಮಾನ ಇಲ್ಲದೆ ಹೋದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಪ್ರಶ್ನೆ ಬರುತ್ತದೆ. ೩೫ ಜನರನ್ನು ಸೆಲೆಕ್ಟ್ ಮಾಡಿದ್ದೀರಿ. ಅವರಿಗೆ ಅಪಾಯಿಂಟ್ ಆರ್ಡರ್ ಕೊಟ್ಟಿದ್ದೀರಾ ? ಇವತ್ತಿನ ವರೆಗೂ ಕೊಟ್ಟಿಲ್ಲ ಏತಕ್ಕೆ ಕೊಟ್ಟಿಲ್ಲ ದಯವಾಡಿ ಹೇಳಿ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳಿದ ಎಲ್ಲಾ ಪ್ರಶ್ನೆಗಳಿಗೆ ಪುನಃ ಉತ್ತರ ಕೊಡುವುದು ಇಷ್ಟೆ. ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ಬಂದರೆ ಅಥವಾ ಉಚ್ಚ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ತೆಗೆದುಕೊಂಡು ತೀರ್ಪು ಕೊಡಲಿಕ್ಕೆ ವಿಳಂಬ ಆದರೆ ಅದಕ್ಕೆ ಉಪಾಯ ನಮ್ಮಲ್ಲೇನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮಲ್ಲುಂಟು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ. ಕಳೆದ ಐದು ವರ್ಷಗಳಲ್ಲಿ ಯಾವ ಯಾವ ಕ್ರಮವನ್ನು ಇದರ ಇತ್ಯರ್ಥ ಮಾಡಲಿಕ್ಕೆ ನಾವು ತೆಗೆದುಕೊಂಡಿದ್ದೇವೆ ಎಂಬುದನ್ನು ಹೆಜ್ಜೆಹೆಜ್ಜೆಗೂ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ಬಸವಲಿಂಗಪ್ಪನವರಿಗೆ ನಾನು ಕೊಡುತ್ತೇನೆ. ಉಚ್ಚ ನ್ಯಾಯಾಲಯ ಪೀಠದಲ್ಲಿ ಸಿಂಗಲ್ ಜಡ್ಜ್ ಬೆಂಚ್ ಮುಂದೆ ಬಂದು ತಡೆಯಾಜ್ಞೆ ಬಂದ ಮೇಲೆ ನಾವು ಅದರ ವಿರುದ್ಧ ಅಪೀಲ್ ಹಾಕಿದೆವು. ಅಲ್ಲಿಯೂ ಕೂಡ ತಡೆಯಾಜ್ಞೆ ತೆರವು ಮಾಡುವುದಕ್ಕೆ ನಿರಾಕರಣೆ ಮಾಡಿದ್ದಾರೆ. ಆದಾದ ಮೇಲೆ ಈ ವಿಚಾರ ಆಡಳಿತ ನ್ಯಾಯ ಮಂಡಲಿಗೆ ಸೇರಿದ್ದುದು ಎಂದು ಅದನ್ನು ಇಲ್ಲಿಗೆ ಟ್ರಾನ್ಸ್‌ಫರ್ ಮಾಡಿದರು. ನಮ್ಮ ಸಮಾಜ ಕಲ್ಯಾಣ ಮಂತ್ರಿಗಳು ಆಗಾಗ ಸಭೆಯನ್ನು ಕರೆದು ಅಡ್ವೊಕೇಟ್ ಜನರಲ್ ಅವರನ್ನೂ ಕರೆದು ಮುಂದೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ

ಬಗ್ಗೆ ಚರ್ಚೆ ಮಾಡುತ್ತಿದ್ದರು, ಸರ್ಕಾರದ ಪರವಾಗಿ ಯಾವುದೇ ರೀತಿಯ ವಿಳಂಬ ಆಗಿಲ್ಲ ಮತ್ತು ಯಾವುದೇ ರೀತಿಯ ತಾತ್ಸಾರ ಆಗಿಲ್ಲ. ಮುಂದೆ ಯಾವ ರೀತಿ ಮಾಡಬೇಕು ಎಂಬುದನ್ನು ಮಾನ್ಯ ಬಸವಲಿಂಗಪ್ಪನವರು ಸೂಚನೆ ಮಾಡಲಿ. ಅದು ಕಾಯಿದೆ ಪ್ರಕಾರ ಮಾಡುವಂಥದ್ದಾದರೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಇದನ್ನು ನಾವು ಒಪ್ಪಿಕೊಳ್ಳೋಣ ಉದ್ದೇಶ ಪೂರ್ವಕವಾಗಿ ನೀವು ಮಾಡಿದ್ದೀರಿ ಎಂದು ನಾವು ಹೇಳುವುದಿಲ್ಲ. ಆದರೆ ಗೌರ್ನಮೆಂಟ್ ಅಡ್ವೋಕೇಟ್ ಇಂಥ ಕೇಸ್ ಗಳನ್ನು ತೆಗೆದುಕೊಳ್ಳುವುದಿಲ್ಲ ಎಂಬುದು ನಮ್ಮ ಆಪಾದನೆ. ಏಕೆಂದರೆ ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ಕೂಡ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳನ್ನು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಬೇಕು ಎಂದು ಆಜ್ಞೆ ಹೊರಡಿಸಿದಾಗ ಅದಕ್ಕೂ ಕೂಡ ಸ್ಟೇ ಆರ್ಡರ್ ಕೊಟ್ಟಿದೆ. ಅದು ಐದು ವರ್ಷ ಆಯಿತು ಅಂದರೆ ಪೆಡ್ಡೊಲ್ಡ್ ಕ್ಯಾಸ್ಟ್‌ನವರ ಕೇಸಿಗೆ ೫ ವರ್ಷ ಆಗುತ್ತದೆ. ಯಾರು ನೋಡುವುದಿಲ್ಲ ಎಂದಾಯಿತು. ಡೈರೆಕ್ಟ್ ರೆಕ್ರೂಟ್‌ಮೆಂಟಿಗೂ ಸ್ಟೇ ಆರ್ಡರ್, ಪಬ್ಲಿಕ್ ಸರ್ವೀಸ್ ಕಮೀಷನ್‌ನಿಂದ ಮಾಡಿದ್ದಕ್ಕೂ ಸ್ಟೇ ಆರ್ಡರ್ ಆದರೆ ಜನರಿಗೆ ಉದ್ದೇಶಪೂರ್ವಕವಾಗಿ ಪೆಡ್ಡೊಲ್ಡ್ ಕ್ಯಾಸ್ಟ್ ವಿರುದ್ಧವಾಗಿ ಮಾಡುತ್ತಾರೆ ಎಂಬ ಭಾವನೆ ಬರುತ್ತದೆಯೋ ಇಲ್ಲವೋ ಹೇಳಿ ನೀವೇ ಇದು ಒಂದು ಕಡೆ ಆದರೆ ಇನ್ನೊಂದು ಕಡೆ ಇನ್ನೊಂದು ರೀತಿ ಆಗುತ್ತಿದೆ. ಉದಾಹರಣೆಗೆ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ, ಕಾವೇರಿ ಮತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಇಂಜಿನಿಯರುಗಳನ್ನು ಡೈರಕ್ಟ್ ರೆಕ್ರೂಟ್ ಮಾಡಿಕೊಂಡಿದ್ದಾರೆ. ಅಲ್ಲಿ ಟೆಂಪೊರರಿಯಾಗಿ ಮಾಡಿರಬಹುದು. ಅಲ್ಲಿ ರೋಸ್ಟರ್ ಸಿಸ್ಟಮ್ ಫಾಲೋ ಮಾಡಿಲ್ಲ. ಎರಡು ವರ್ಷಗಳಾದ ನಂತರ ಅವರಿಂದ ಒತ್ತಡ ಬರುತ್ತದೆ. ನಾವು ಕಾಲಿಂಗ್ ಅಟೆನ್‌ಷನ್ ಕಳುಹಿಸುತ್ತೇವೆ. ಕೆಲವು ಸದಸ್ಯರು ಕೊಶ್ಚನ್ ಕಳುಹಿಸುತ್ತಾರೆ. ಆಗ ಮಾನವೀಯತೆಯ ದೃಷ್ಟಿಯಿಂದ ಕನ್‌ಫರ್ಮ್ ಮಾಡೋಣ ಎಂದು ಹೇಳುತ್ತೀರಿ. ಆದರಲ್ಲಿ ೨೦೦-೩೦೦ ಜಾಗ ಈ ಜನರಿಗೆ ಹೋಗುತ್ತದೆ. ಈ ರೀತಿ ಈ ಜನರಿಗೆ ಅನ್ಯಾಯ ಆಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ತಕ್ಷಣ ಕ್ರಮ ತೆದುಕೊಳ್ಳುತ್ತೀರಾ ? ನೀವು ರಿಗ್ರೆಟ್ ಹೇಳಿದರೆ ನಾವು ಏನೂ ಅನ್ನುವ ಹಾಗಿಲ್ಲ. ಆದರೆ ಪ್ರಯೋಜನ ಏನು ? ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಆಡಳಿತ ನ್ಯಾಯ ಪೀಠದ ಮುಂದೆ ಏನು ತೀರ್ಮಾನ ಆಗುತ್ತದೆಯೋ ಅದನ್ನು ನೋಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —೧೯೮೨-೮೩ರಲ್ಲಿ ಯಾವ ರ್ಯಾಂಕ್ ಹೋಲ್ಡರ್ಸ್ ಇದ್ದಾರೆ ಅವರಿಗೆ ನೇಮಕಾತಿ ಮಾಡಿದ್ದೀರಿ. ಇನ್ನೂ ಕೆಲವರಿದ್ದಾರೆ. ಅವರಿಗೆ ವಯಸ್ಸು ಮೀರಿದರೆ ಏನು ಮಾಡುತ್ತೀರಿ ಎಂಬ ಪ್ರಶ್ನೆ ಬರುತ್ತದೆ ಯಾರು ಯಾರಿದ್ದಾರೆ ಈಗ ಅವರನ್ನು ಕಂಟಿನ್ಯೂ ಮಾಡುತ್ತೀರೋ ಹೇಗೆ? ಇನ್ನೊಂದು ವಿಚಾರ ಏನೆಂದರೆ ಹೈಕೋರ್ಟಿನವರು ಬೇಕುಬೇಕಾಗಿ ಇಂಥ ಒಂದು ಸಾಮಾಜಿಕ ನ್ಯಾಯ ವಾಡುವ ಕೇಸುಗಳನ್ನು ಇಷ್ಟು ಬೇಜವಾಬ್ದಾರಿಯಿಂದ, ಜಾತಿಯ ಹಿನ್ನೆಲೆಯಲ್ಲಿ ತಡ ಮಾಡುವುದಾದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಅದಕ್ಕೆ ಅವಕಾಶ ಇದೆ, ಮುಖ್ಯ ನ್ಯಾಯಾಧೀಶರನ್ನು ಕರೆದು ಮಾತನಾಡಬೇಕು. ಜವಾಬ್ದಾರಿ ಅವರಿಗಿಲ್ಲದೇ ಹೋದರೆ ಜವಾಬ್ದಾರಿಯನ್ನು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಹೈಕೋರ್ಟ್‌ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದು ನನಗೆ ಗೊತ್ತಿಲ್ಲ. ಹೈಕೋರ್ಟ್ ವಿಚಾರದಲ್ಲಿ ಯಾವುದೇ ರೀತಿಯ ಅಸ್ಪರ್ಷನ್ ಮಾಡುವುದು ಸರಿಯಲ್ಲ. ೧೯೮೨-೮೩ ಮತ್ತು ೧೯೮೪-೮೫ರಲ್ಲಿ ಯಾವ ಅಭ್ಯರ್ಥಿಗಳನ್ನು ನಾವು ಆಯ್ಕೆ ಮಾಡಿದ್ದೇವೆ, ಯಾವ ಅಭ್ಯರ್ಥಿಗಳು ಇದಕ್ಕೆ ಆರ್ಹರಾಗಿದ್ದಾರೆ ಅಂಥವರನ್ನು ತಡೆಯಾಜ್ಞೆ ಹೋದರೆ ನೇಮಕಾತಿ ಮಾಡಿಕೊಳ್ಳುತ್ತೇವೆ. ಅವರಿಗೆ ವಯಸ್ಸಿನ ವಿತಿ ಮೀರಿದರೂ ಕೂಡ ಅದನ್ನು ಕಂಡೋನ್ ಮಾಡಿ ಸೇವೆಯಲ್ಲಿ ಅವರನ್ನು ತೆಗೆದುಕೊಳ್ಳುತ್ತೇವೆ.